ಶ್ರೀ ವಾಟಾಳ್ ನಾಗರಾಜ್:– ಸದನದ ಕಾರ್ಯಕಲಾಪಗಳನ್ನು ನೇರವಾಗಿ ಪ್ರಸಾರ ಮಾಡುವುದಕ್ಕೆ...

ಶ್ರೀ ವೀರಪ್ಪಮೊಯಿಲಿ:– ಅದನ್ನೂ ಸೇರಿಸಿ ಬರೆಯುತ್ತೇನೆ.

3. ನಂಜನಗೂಡು ತಾಲ್ಲೂಕಿನಲ್ಲಿ ಆನೆಗಳ ಕಾಟ.

ಶ್ರೀ ಎಂ. ಮಹಾದೇವ್ (ನಂಜಗೂಡು):– ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಆನೆಗಳ ಕಾಟ ಜಾಸ್ತಿ. ನಾವು ನಮ್ಮ ಕ್ಷೇತ್ರಕ್ಕೆ ಹೋಗುವುದಕ್ಕಾಗುತ್ತಿಲ್ಲ. ಜನರು ನಮ್ಮನ್ನು ಕಾಯುತ್ತಿದ್ದಾರೆ. ಆನೆಗಳ ಕಾಟವನ್ನು ತಪ್ಪಿಸದೆ ಈ ಸದನದಲ್ಲಿ ಮಾಡುವ ಚರ್ಚೆಯಾದರೂ ಏನು? ನಮಗೆ ಗಮನ ಸೆಳೆಯುವ ಸೂಚನೆಗೂ ಅವಕಾಶವಿಲ್ಲ, ಪ್ರಶ್ನೆ ಕೇಳುವುದಕ್ಕೂ, ಅವಕಾಶವಿಲ್ಲವೆಂದರೆ ನಾವು ಏನು ಮಾಡಬೇಕು? ಅಲ್ಲಿ ಆನೆಗಳು ಜನರನ್ನು ತುಳಿದು ಸಾಯಿಸುತ್ತಿವೆ. ಬೆಳೆಯನ್ನು ನಾಶಮಾಡುತ್ತಿವೆ. ಇದಕ್ಕೆ ಪರಿಹಾರ ಏನೂ ಇಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆಮಾಡಲು ನನಗೆ ಕಾಲಾವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಮಗೆ ಆನೆಗಳ ಕಾಟ ಜಾಸ್ತಿ ಇರುವುದರಿಂದ ನಮಗೆ ರಕ್ಷಣೆ ಕೊಡಿ ಎಂದು ಮಾನ್ಯ ಅಧ್ಯಕ್ಷರ ಮೊರೆ ಹೋದರೆ ಏನು ಮಾಡುವುದು? ಆನೆಗಳು ಅವರ ಪಕ್ಕದಲ್ಲೇ ಬರುತ್ತಿವೆ. ತಾವು ಯಾವರೀತಿ ರಕ್ಷಣೆಯನ್ನು ಕೊಡಬೇಕೋ ಅದನ್ನು ಕೊಡದಿದ್ದರೆ ನಮ್ಮ ಗತಿ ಏನು? ನಮಗೆ ನೀವೇ ರಕ್ಷಣೆ ಕೊಡುವವರು. ದಯವಿಟ್ಟು ಅಲ್ಲಿ ಆನೆಗಳ ಕಾಟ ತಪ್ಪಿಸಿ ಇಲ್ಲದಿದ್ದರೆ ಅವರನ್ನು ಮಂತ್ರಿಯನ್ನಾಗಿ ಮಾಡಿ.

ಶ್ರೀ ಎಂ. ಮಹದೇವ್:– ಊರಿಗೆ ಹೋದರೆ ೪ ಕಾಲಿನ ಆನೆಗಳ ಕಾಟ, ಇಲ್ಲಿ ಇದ್ದರೆ ೨ ಕಾಲಿನ ಆನೆಗಳ ಕಾಟ. ನಾವು ಯಾವ ಕಾಟ ತಡೆದುಕೊಳ್ಳಲು ಆಗುತ್ತದೆ? ದಯವಿಟ್ಟು ಮಾತನಾಡಲು ನಮಗೆ ಅವಕಾಶ ಕೊಡಿ.

ಅಧ್ಯಕ್ಷರು:– ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ್:– ಇತ್ತೀಚೆಗೆ ನಾನು ಊರಿಗೆ ಹೋಗಿದ್ದೆ. ಅಲ್ಲಿ ನಷ್ಟಕ್ಕೊಳಗಾದ ಜನರಿಗೆ ಪರಿಹಾರವನ್ನು ಕೊಟ್ಟಿಲ್ಲ. ಒಂದುಕಡೆ ಬೆಳೆ ಹಾನಿ, ಇನ್ನೊಂದು ಕಡೆ ಜೀವಹಾನಿಯಿಂದ ಜನರು ಬಹಳ ತೊಂದರೆ ಪಡುತ್ತಿದ್ದಾರೆ. ಈಗ ಮತ್ತೆ ನಾನು ನನ್ನ ಕ್ಷೇತ್ರಕ್ಕೆ ಹೋಗುವಂತಿಲ್ಲ. ಈ ಸದನ ೨೩ನೇ ತಾರೀಖು ಮುಗಿಯುತ್ತದೆ. ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶಕೊಡಿ.

ಅಧ್ಯಕ್ಷರು:– ತಮ್ಮ ಹತ್ತಿರಕ್ಕೆ ಬಿಳಿ ಆನೆಯನ್ನು ಕಳುಹಿಸಿಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ರೈತರು ಸಹಕಾರ ಸಂಘಗಳಲ್ಲಿ ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಇವತ್ತು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ಭರವಸೆಯನ್ನು ಕೊಟ್ಟಿದ್ದರು.

ಶ್ರೀ ಎಂ. ವೀರಪ್ಪಮೊಯಿಲಿ:– ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇವತ್ತೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಇನ್ನು ೨–೩ ದಿವಸದಲ್ಲಿ ತಮಗೆ ಹೇಳಿಕೆ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:– ನಮ್ಮ ಕಡೆಯವರನ್ನೂ, ನಿಮ್ಮ ಕಡೆಯವರನ್ನೂ ಕರೆದು ಸಲಹೆಗಳನ್ನು

ತೆಗೆದುಕೊಂಡರೆ ಒಂದು ತೀರ್ಮಾನಕ್ಕೆ ಬರುವುದಕ್ಕೆ ನಿಮಗೆ ಅನುಕೂಲವಾಗುತ್ತದೆ. ಆದ್ದರಿಂದ ಆ ಸಭೆಯನ್ನು ಇವತ್ತು ಅಥವಾ ನಾಳೆ ಕರೆದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:– ಆದಷ್ಟು ಬೇಗ ವಿರೋಧಪಕ್ಷದ ಮುಖಂಡರನ್ನು ಕರೆದು ಚರ್ಚೆಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವತ್ತು ಸಂಜೆಯೇ ತಾವು ಅವಕಾಶವನ್ನು ಮಾಡಿಕೊಟ್ಟರೆ ನಾವು ಮಾತನಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ:– ಇವತ್ತು ಅಥವಾ ನಾಳೆ ಮಾಡೋಣ.

1993–94ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಭಾರಿ ಮತ್ತು ಮಧ್ಯಮ ನೀರಾವರಿ, ಎದ್ಯುಚ್ಛಕ್ತಿ, ಇತ್ಯಾದಿ ಇಲಾಖೆಗಳ ಬೇಡಿಕೆಗಳು

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಬಹಳ ಪ್ರಮುಖವಾದ ಬೇಡಿಕೆಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ಲೋಕೋಪಯೋಗಿ, ನೀರಾವರಿ ಮತ್ತು ವಿದ್ಯುಚ್ಛಕ್ತಿ ಇಲಾಖೆಗಳ ಬಗ್ಗೆ ವಿರೋಧಪಕ್ಷದ ನಾಯಕರು ಮತ್ತಿತರ ಪ್ರಮುಖ ಸದಸ್ಯರು ಸಾಕಷ್ಟು ಸಲಹೆಗಳನ್ನು ಕೊಟ್ಟು ಇದರಲ್ಲಿರತಕ್ಕ ನ್ಯೂನತೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುವ ಪ್ರಯತ್ನಮಾಡಿದ್ದಾರೆ. ಈ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಗ್ರಾಮೀಣ ಜನರು ನೆಮ್ಮದಿಯಿಂದ ಬಾಳಿ, ನಿಟ್ಟುಸಿರು ಬಿಡದಂಥ ವಾತಾವರಣ ಉಂಟಾಗಬೇಕಾದರೆ, ನಮ್ಮ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಣೆ ಆಗಬೇಕೆಂದಿದ್ದರೆ ಈ ಮೂರು ಇಲಾಖೆಗಳ ಅಭಿವೃದ್ಧಿಯ ಬಗ್ಗೆ ವಿಶೇಷವಾದ ಕಾಳಜಿಯನ್ನು ತಾವು ವಹಿಸಬೇಕಾಗುತ್ತದೆ. ಈ ಬಜೆಟ್‌ನಲ್ಲಿ ಏನು ಅನುದಾನವನ್ನು ಕೊಟ್ಟಿದ್ದೀರಿ ಇದು ಈ ಮೂರು ಇಲಾಖೆಗಳಿಗೆ ಏನೇನೂ ಸಾಲದು. ವಿಶೇಷವಾಗಿ ಹೇಳುವುದಾದರೆ ಕೃಷ್ಣಾ ಕಾವೇರಿ ಬೇಸಿನ್‌ನ ಅಭಿವೃದ್ಧಿ ದೃಷ್ಟಿಯಿಂದ ಬಚಾವತ್ ಆಯೋಗದ ತೀರ್ಪಿನಂತೆ 2000ನೇ ಇಸವಿಯೊಳಗೆ ಈ ಕೆಲಸ ಪೂರ್ತಿಯಾಗ ಬೇಕೆಂದಿದ್ದರೆ, ಈ ಎರಡೂ ಬೇಸಿನ್‌ಗಳಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಕನಿಷ್ಠ 1000 ಕೋಟಿ ರೂ.ಗಳನ್ನಾದರೂ ತಾವು ಕೂಡಲೇ ನೀರಾವರಿ ಇಲಾಖೆಗೆ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಖರ್ಚುಮಾಡದಿದ್ದರೆ ಬಹುಶಃ ಮುಂದಿನ ಪೀಳಿಗೆ ನಿಮ್ಮನ್ನು ಕ್ಷಮಿಸುವುದಿಲ್ಲ ಎನ್ನತಕ್ಕ ಮಾತನ್ನು ನಾನು ಪದೇ ಪದೇ ಹೇಳುತ್ತಿದ್ದೇನೆ.

ದೊಡ್ಡ ಪ್ರಮಾಣದಲ್ಲಿ ಮಂತ್ರಿಮಂಡಲ ಇದೆ. ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಕೃಷ್ಣರವರಿಗೆ ಒತ್ತಾಯ ಮಾಡುವುದೇನೆಂದರೆ ದಯವಿಟ್ಟು ಕೃಷ್ಣಾ ಬೇಸಿನ್‌ನಲ್ಲಿ ಏನು ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ ಅದು ಎರಡು ಸಾವಿರದ ವರ್ಷದಲ್ಲಿ ಅದು ಮುಗಿಯಬೇಕಾಗಿದೆ. ಅದು ಆಗಬೇಕಾಗಿರುವಂಥ ಕಳಕಳಿ ನಿಮಗೆ ಇದ್ದರೆ ನಿಮ್ಮ ಜೊತೆಯಲ್ಲಿರತಕ್ಕಂಥ ಒಬ್ಬ ಉಪಮಂತ್ರಿಯನ್ನು, ಒಬ್ಬ ಸಹಾಯಕ ಸಚಿವರನ್ನು ಇವತ್ತು ಕೃಷ್ಣಾಬೇಸಿನ್‌ನಲ್ಲಿ ಹಾಕಿ ಅಲ್ಲಿಯ ಅಭಿವೃದ್ಧಿಯನ್ನು ನೋಡಿಕೊಳ್ಳುವುದಕ್ಕೋಸ್ಕರ ಅವರನ್ನು ನಿಯುಕ್ತಿ ಮಾಡುವಂಥದ್ದು ಅಗತ್ಯವಾಗಿದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಇಲ್ಲಿ ಇರುವಂಥ ಉನ್ನತ ಅಧಿಕಾರಿಗಳ ಕಮಿಟಿ ಏನು ಇದೆ ಅದಕ್ಕೆ ಸಂಬಂಧಪಟ್ಟ ಇಲಾಖೆಯವರು ಏನಿದ್ದಾರೆ ಅವರು ಬೆಂಗಳೂರಿಗೆ ಬರುವಂಥ ಅಗತ್ಯವೇನೂ ಇಲ್ಲ. ಆ ಭಾಗದಲ್ಲಿ ಅವರನ್ನು ಅಲ್ಲಿಯೇ ನಿಲ್ಲಿಸಿ ಅಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳಾಗಬೇಕೋ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಆ ಸ್ಥಳದಲ್ಲಿಯೇ ತೀರ್ಮಾನವನ್ನು ತೆಗೆದುಕೊಂಡು ಬೆಂಗಳೂರಿಗೆ ಬರದ ರೀತಿಯಲ್ಲಿ ಏನಾದರೂ ಒಂದು ವಿಶೇಷವಾದಂಥ ವ್ಯವಸ್ಥೆಯನ್ನು ಮಾಡಿ ಈ ಕೆಲಸ ಕಾರ್ಯಗಳಲ್ಲಿ ತಾವು ಮುನ್ನುಗ್ಗಿದರೆ ಮಾತ್ರ ಈ ರಾಜ್ಯದ ಜನರಿಗೆ ಸಮಯಕ್ಕೆ ಸರಿಯಾಗಿ, ಅವರ ಹೊಲಕ್ಕೆ ನೀರನ್ನು ಕೊಡುವುದಕ್ಕೆ ಆಗುತ್ತದೆ. ಅವರ ಜೀವನಕ್ಕೆ ಒಂದು ದಾರಿ